# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ


ದಾವಣಗೆರೆ
ಮಂಗಳವಾರ, ಜೂನ್ 21, 2022

ಸಂಪುಟ : 49 ಸಂಚಿಕೆ : 38 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





## ನಗರದಲ್ಲಿ ಇಂದು ನಾಯಕ ಸಮಾಜದ ಸಭೆ



ನಿವೃತ್ತ ನ್ಯಾಯಾಧೀಶ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಕಳೆದ 130 ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ ಸರ್ಕಾರ ಸ್ಪಂದಿಸಿಲ್ಲ.

ಕಾರಣ ಮುಂದಿನ ಹೋರಾಟದ ರೂಪುರೇಷೆ ಬಗ್ಗೆ ಚರ್ಚಿಸಲು ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಮುಖಂಡರ ಸಭೆಯನ್ನು ನಾಯಕ ಹಾಸ್ಟೆಲ್‌ನ ವಾಲ್ಮೀಕಿ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 11.30 ಗಂಟೆಗೆ ಕರೆಯಲಾಗಿದೆ. ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಸಭೆಗೆ ಜಿಲ್ಲೆಯ ವಾಲ್ಮೀಕಿ ನಾಯಕ ಸಮಾಜ ಬಾಂಧವರು ಭಾಗವಹಿಸಲು ಕೋರಲಾಗಿದೆ.

## ಮುದಹದಡಿ ಗ್ರಾ.ಪಂ. ಅಧ್ಯಕ್ಷರಾಗಿ ಹಳೇಬಿಸಲೇರಿ ಮಂಜಮ್ಮ



ದಾವಣಗೆರೆ, ಜೂ.20- ತಾಲ್ಲೂಕಿನ ಮುದಹದಡಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಹಳೇಬಿಸಲೇರಿಯ ಶ್ರೀಮತಿ ಮಂಜಮ್ಮ ದುರುಗಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮುದಹದಡಿಯ ಆನಂದಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಮಂಜಮ್ಮ ಆಯ್ಕೆ ನಡೆದಿದೆ. ಉಪಾಧ್ಯಕ್ಷರಾಗಿ ಜರೀಕಟ್ಟೆಯ ಪಾರ್ವತಮ್ಮ ಶಿವರಾಜ್ ಆಯ್ಕೆಯಾಗಿದ್ದಾರೆ.

## ಯೋಗದ ವಿಶೇಷ : ಅಂಚೆ ಇಲಾಖೆಯಿಂದ ಚಿತ್ರಾತ್ಮಕ ಮುದ್ರೆ

ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ದಾವಣಗೆರೆಯ ಪ್ರಧಾನ ಅಂಚೆ ಕಚೇರಿಯಲ್ಲಿ ಇಂದು ಯೋಗ ವಿಶೇಷ ಚಿತ್ರಾತ್ಮಕ ಮುದ್ರೆಯನ್ನು ಬಿಡುಗಡೆಗೊಳಿಸಲಿದ್ದು, ಸ್ವೀಕೃತವಾಗುವ ಮತ್ತು ಬಟವಾಡೆಯಾಗುವ ಎಲ್ಲಾ ಪತ್ರಗಳಿಗೆ ವಿಶೇಷ ಚಿತ್ರಾತ್ಮಕ ಮುದ್ರೆಯನ್ನು ಒತ್ತಲಾಗುತ್ತದೆ.

ಅಂಚೆ ಚೀಟಿ ಹವ್ಯಾಸಿ ಸಂಗ್ರಹಗಾರರು, ವಿದ್ಯಾರ್ಥಿಗಳು ಹಾಗೂ ಆಸಕ್ತ ನಾಗರಿಕರು ಸದುಪಯೋಗ ಪಡೆದುಕೊಳ್ಳಬಹುದು ಎಂದು ಅಂಚೆ ಅಧೀಕ್ಷಕ ಓ.ವಿರೂಪಾಕ್ಷಪ್ಪ ತಿಳಿಸಿದ್ದಾರೆ.

## ಪ್ರಧಾನಿಗೆ ಆತ್ಮೀಯ ಸ್ವಾಗತ

(5ನೇ ಪುಟದಿಂದ) ವಾಯುನೆಲೆಯಲ್ಲೇ ಮಾಜಿ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಟ್ಟಿಗೆ ಮುಖಾಮುಖಿ ಚರ್ಚೆ ಮಾಡಿದ ಪ್ರಸಂಗ ನಡೆಯಿತು. ಪ್ರಧಾನಿಯವರನ್ನು ಬ ರ ಮಾ ಡಿ ಕೊ ಳ್ಳ ಲು ವಾಯುನೆಲೆಗೆ ಆಗಮಿಸಿದ್ದ ಯಡಿಯೂರಪ್ಪರನ್ನು ಕಂಡು ನಗು ಮುಖದಲ್ಲೇ ಅವರ ಬಳಿ ಸ್ವಲ್ಪ ಕಾಲ ನಿಂತು ಮಾತನಾಡಿದರು.

## ಖಾಲಿ ಶೆಡ್‌ಗಳು

(5ನೇ ಪುಟದಿಂದ) ಹಲವರಿಗೆ ನಿವೇಶನವನ್ನು ಖರೀದಿಸಲು ಸಾಧ್ಯವಾಗುವುದಿಲ್ಲ. ಕೆಲವರಿಗೆ ಕಟ್ಟಡ ನಿರ್ಮಿಸಿಕೊಳ್ಳಲೂ ಆಗುವುದಿಲ್ಲ. ಇಂಥವರಿಗಾಗಿ ಬಾಡಿಗೆ ರೂಪದಲ್ಲಿ ಶೆಡ್‌ಗಳನ್ನು ನೀಡಲು ವಿಶ್ವ ಯೋಜನೆ ರೂಪಿಸಲಾಗಿದೆ.

(5ನೇ ಪುಟದಿಂದ) ಗಳಿಗಿಂತ ಭಿನ್ನವಾಗಿರಲಿದೆ.


ನಾಲ್ಕು ವರ್ಷಗಳಲ್ಲಿ ಕಲಿತ ಗೌಪ್ಯ ಮಾಹಿತಿ ಯನ್ನು ಬಹಿರಂಗ ಪಡಿಸುವಂತಿಲ್ಲ. ಇವರಿಗೆ 1923ರ ಅಧಿಕೃತ ಗೌಪ್ಯತಾ ಕಾಯ್ದೆ ಅನ್ವಯವಾಗುತ್ತದೆ.

## ಕಾರಿಡಾರ್ : ಜಾಗಕ್ಕಾಗಿ ಪ್ರಸ್ತಾವನೆ

(5ನೇ ಪುಟದಿಂದ) ವಸಾಹತುವಿನಲ್ಲಿ 1 ಕೋಟಿ ರೂ.ಗಳ ಚರಂಡಿ ಕಾಮಗಾರಿ ಕೈಗೊಳ್ಳಲಿಕ್ಕೆ ಪಾಲಿಕೆಯವರು ಕ್ರಮ ತೆಗೆದುಕೊಂಡಿಲ್ಲ. ಹೀಗಿರುವಾಗ ಹರಿಹರ ನಗರಸಭೆಯು 5 ಕೋಟಿ ರೂ. ಒದಗಿಸುವುದು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

**ಉದ್ಯೋಗಕ್ಕೆ ಸೂಚನೆ :** ಪ್ರಧಾನ ಮಂತ್ರಿ ಉದ್ಯೋಗ ಸೃಜನೆ ಯೋಜನೆ (ಪಿಎಂಇಜಿಪಿ) ಅಡಿ ಉದ್ಯೋಗ ಸೃಷ್ಟಿಯ ಗುರಿ ಕಡಿಮೆಯಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾಧಿಕಾರಿ, ಈ ಬಗ್ಗೆ ತ್ವರಿತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕೈಗಾರಿಕಾ ನಿರ್ದೇಶಕ ಆನಂದ್, ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಶಂಭು ಬಸವನಾಳ್ ಮತ್ತಿತರರು ಉಪಸ್ಥಿತರಿದ್ದರು.

## ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಕಟಿಬದ್ಧ



(5ನೇ ಪುಟದಿಂದ) ಮುಡುಪಾಗಿಟ್ಟು, ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿ, ಅವು ಅನುಷ್ಠಾನಗೊಳಿಸುವಂತೆ ನೋಡಿಕೊಂಡಿದ್ದೇವೆ. ಇದರಿಂದ ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಸಹಕಾರಿಯಾಗಿರುವುದಲ್ಲದೆ, ಬಡವರ ಆರ್ಥಿಕ ಸ್ಥಿತಿಯನ್ನು ಮೇಲೆತ್ತಲು ಮತ್ತು ಅವರ ಹಸಿವನ್ನು ನೀಗಿಸಲು ಸಹಕಾರಿಯಾಗಿದೆ ಎಂದರು.

ಕನ್ನಡದಲ್ಲಿ ಭಾಷಣ ಆರಂಭಿಸಿದ ಪ್ರಧಾನಿಯವರು ಮೂಲ ಸೌಕರ್ಯ ಮತ್ತು ಅಭಿವೃದ್ಧಿ ಕಲ್ಪಿಸುವುದರಿಂದ ಉದ್ಯೋಗಾವಕಾಶಗಳು ತಾನಾಗಿಯೇ ಲಭ್ಯವಾಗುತ್ತವೆ. ಇದು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಲ್ಲ. ಇಡೀ ರಾಜ್ಯದಲ್ಲಿ ಅಭಿವೃದ್ಧಿಗೆ ನಾಂದಿ ಹಾಡಲಾಗುವುದು ಎಂದು ಹೇಳಿದರು. ಕೇಂದ್ರದಲ್ಲಿ ತಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ನೂರು ಬಿಲಿಯನ್ ಡಾಲರ್ ಮೌಲ್ಯದ ಕೆಲವೇ ಕಂಪನಿಗಳಿದ್ದವು. ಆದರೆ ಇವತ್ತು ನೂರು ಬಿಲಿಯನ್ ಡಾಲರ್ ಮೌಲ್ಯದ ನೂರಕ್ಕೂ ಅಧಿಕ ಕಂಪನಿಗಳಿವೆ ಎಂದು ಹೇಳಿದರು.

## ರಾಜನಹಳ್ಳಿ ಮಠದಲ್ಲಿ ಇಂದು ಎಸ್ಸಿ-ಎಸ್ಟಿ ಸಭೆ

ನಿವೃತ್ತ ನ್ಯಾಯಾಧೀಶ ನಾಗಮೋಹನ್‌ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕಳೆದ 130 ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ ಈ ಬಗ್ಗೆ ಸರ್ಕಾರ ಇದುವರೆಗೂ ಸ್ಪಂದಿಸಿಲ್ಲ. ಕಾರಣ ಮುಂದಿನ ಹೋರಾಟದ ರೂಪುರೇಷೆ ಬಗ್ಗೆ ಚರ್ಚಿಸಲು ಹರಿಹರ ತಾಲ್ಲೂಕಿನ ಎಸ್ಸಿ-ಎಸ್ಟಿ ಜನಾಂಗಗಳ ಮುಖಂಡರ ಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಕರೆಯಲಾಗಿದೆ ಎಂದು ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ, ಕೆ.ಬಿ. ಮಂಜುನಾಥ್ ತಿಳಿಸಿದ್ದಾರೆ.

## ಐ.ಟಿ.ಐ ಲೋಕಾರ್ಪಣೆ

(5ನೇ ಪುಟದಿಂದ) ಒಂದು ಲಕ್ಷ ನುರಿತ ಮಾನವ ಸಂಪನ್ಮೂಲವನ್ನು ಸೃಷ್ಟಿಸಲು ಈ ಯೋಜನೆ ರೂಪಿಸಲಾಗಿದೆ.

ಈ ಸಂಸ್ಥೆಯಲ್ಲಿ ಈ ಸಾಲಿನಿಂದ ಅಡ್ವಾನ್ಸ್‌ಡ್ ಸಿಎನ್‌ಸಿ ಮೆಷಿನಿಂಗ್ ಟೆಕ್ನೀಷಿಯನ್, ಮೆಕ್ಯಾನಿಕ್, ಬ್ಯಾಟರಿ ಎಲೆಕ್ಟ್ರಿಕ್ ವೆಹಿಕಲ್ ಹಾಗೂ ಇಂಡಸ್ಟ್ರಿಯಲ್ ರೋಬೋಟಿಕ್ಸ್ ಮತ್ತು ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ ನಂತಹ ಮೂರು ವಿಭಾಗಗಳಲ್ಲಿ ತರಬೇತಿಯನ್ನು ಪ್ರಾರಂಭಿಸಿದ್ದು, ಇದರಿಂದ ಐಟಿಐ ವಿದ್ಯಾರ್ಥಿಗಳಿಗೆ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ ಮತ್ತು ಉದ್ಯಮಶೀಲತಾ ಅವಕಾಶಗಳು ವೃದ್ಧಿಸಲಿವೆ.

## ಗದಗ - ಹೊನ್ನಾಳಿ ರಸ್ತೆ ಅಗಲೀಕರಣ



(5ನೇ ಪುಟದಿಂದ) ಲಕ್ಷ ಆಗುತ್ತದೆ. ನಾವೇ ಪ್ರತಿ ಎಕರೆಗೆ 10 ಲಕ್ಷ ಕೊಡುತ್ತೇವೆ ನೀವೇ 10 ಎಕರೆ ಜಮೀನು ನಮಗೆ ಕೊಡಿ ಎಂದು ಅಧಿಕಾರಿಗಳನ್ನು ಕೇಳಿದರು. ಅದಕ್ಕೆ ಉತ್ತರಿಸಿದ ಶಾಸಕರು, ನಾನು ಉನ್ನತ ಮಟ್ಟದ ಅಧಿಕಾರಿಗಳ ಜೊತೆ ಚರ್ಚಿಸಿ, ಪ್ರತಿ ಗುಂಟೆಗೆ ಹೆಚ್ಚಿನ ಪರಿಹಾರ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಅವರು ಭರವಸೆ ನೀಡಿದರು.

ರಸ್ತೆ ಅಗಲೀಕರಣಕ್ಕೆ ಹೋಗುವ ಜಮೀನು ಹೊಂದಿರುವ ಎಲ್ಲಾ ರೈತರು ಬಡವರಿದ್ದಾರೆ. ಅವರಿಗೆ ಸಮರ್ಪಕವಾಗಿ ಪರಿಹಾರ ಕೊಡಿಸಿ ನಾವೇ ಖುಷಿಯಿಂದ ಜಮೀನು ಬಿಟ್ಟುಕೊಡುತ್ತೇವೆ. ನೀವು ಅಧಿಕಾರಕ್ಕೆ ಬಂದ ನಂತರ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಅದಕ್ಕೆ ನಾವೂ ಕೈಜೋಡಿಸುತ್ತೇವೆ. ಆದರೆ ಹೆಚ್ಚಿನ ಪರಿಹಾರ ಕೊಡಿಸಿ ಎಂದು ಶಾಸಕರಲ್ಲಿ ಮನವಿ ಮಾಡಿದಾಗ ಎಲ್ಲಾ ರೈತರು ಒಕ್ಕೊರಲಿನಿಂದ ಮನವಿ ಮಾಡಿದರು.

ನಿಮ್ಮ ಜಮೀನನ್ನು ರಸ್ತೆ ಅಗಲೀಕರಣಕ್ಕೆ ಬಿಟ್ಟುಕೊಡಿ, ಈಗ ಮಾರುಕಟ್ಟೆಯ ಬೆಲೆಗಿಂತ ಹೆಚ್ಚಿನ ಪರಿಹಾರ ನೀಡಿದ್ದಾರೆ. ನಿಮ್ಮ ಪರವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯೂ ಚರ್ಚೆ ಮಾಡುತ್ತೇನೆ. ಯಾರೂ ಅಧೈರ್ಯ ಮಾಡಬೇಡಿ, ನಿಮ್ಮ ಜೊತೆ ನಾನಿದ್ದೇನೆ ಎಂದು ರೈತರ ಮನವಿಗೆ ಸಕಾರಾತ್ಮಕವಾಗಿ ಮಾತನಾಡಿದರು.

ವಿಶೇಷ ಜಿಲ್ಲಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ ಅರುಳಕುಮಾರ್ ಮಾತನಾಡಿ, ರಸ್ತೆ ಅಗಲೀಕರಣ ಬೇಗ ಮುಗಿಯಬೇಕಾದರೆ ಮೊದಲು ರೈತರು ನೇರ ಖರೀದಿಗೆ ಮಹತ್ವ ನೀಡಬೇಕು. ಇಲ್ಲದಿದ್ದರೆ ಭೂಸ್ವಾಧೀನ ಅಧಿನಿಯಮದ ಪ್ರಕಾರ ಭೂಸ್ವಾಧೀನ ಮಾಡಿಕೊಂಡರೆ ಕಾಮಗಾರಿ ಕುಂಟುತ್ತಾ ಸಾಗುತ್ತದೆ. ಆದ್ದರಿಂದ ರೈತರ ಪರಿಹಾರ ವಿಚಾರವಾಗಿ ಶಾಸಕರು ಸರ್ಕಾರದ ಜೊತೆ ಚರ್ಚಿಸಲಿದ್ದಾರೆ. ನೀವು ನೇರ ಖರೀದಿಗೆ ಸಹಿ ಮಾಡಿ ನೋಂದಣಿ ಮಾಡಿಕೊಡಿ ಎಂದು ರೈತರಲ್ಲಿ ಅವರು ಮನವಿ ಮಾಡಿದರು.

ಹೊನ್ನಾಳಿ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಸೀಲ್ದಾರ್ ರಶ್ಮಿ, ಕೆಶಿಪ್‌ನ ಅಧಿಕಾರಿಗಳಾದ ಹೊನಕೇರಿ, ಪ್ರಕಾಶ್, ಪ್ರಹ್ಲಾದ್, ರೈತರಾದ ಮಂಜಪ್ಪ ಸರಳಿನಮನೆ, ಮಂಜುನಾಥ್, ಸೇರಿದಂತೆ, ಅನೇಕ ರೈತರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಜಲಯೋಗ

ದಾವಣಗೆರೆ, ಜೂ.20- ವಿಶ್ವ ಯೋಗ ದಿನಾಚರಣೆ ಅಂಗವಾಗಿ ನಗರದ ಆಫೀಸರ್ಸ್ ಕ್ಲಬ್‌ನಲ್ಲಿ ನಾಳೆ ದಿನಾಂಕ 21ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಜಲಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಮೊಗ್ಗ ಜಿಲ್ಲೆಯ ಸಾಗರದವರು ಹಾಗೂ ಜಲಯೋಗದಲ್ಲಿ ಅದ್ಭುತ ಪ್ರದರ್ಶನ ನೀಡಿದ ಹರೀಶ್ ಡಿ.ನವಾತೆ ಜಲಯೋಗ ಪ್ರದರ್ಶನ ನೀಡಲಿದ್ದಾರೆ. ನಗರದಲ್ಲಿ ನಡೆಯುವ ಜಲಯೋಗದಲ್ಲಿ 28 ಜನರು ಜಲಯೋಗ ಮಾಡಲಿದ್ದಾರೆ ಎಂದರು. ಜಲಯೋಗ ಪರಿಣಿತ ಹರೀಶ್ ಡಿ. ನವಾತೆ, ರಾಜು ಬದ್ದಿ, ಎನ್. ಪರಶುರಾಮ್, ಗಂಗಾಧರ್, ಎನ್.ಸಿ. ವೆಂಕಟೇಶ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಹರಿಹರದ ಲಾಡ್ಜ್‌ನಲ್ಲಿ ಆತ್ಮಹತ್ಯೆ



ಹರಿಹರ, ಜೂ. 20 - ನಗರದ ಹಳೆ ಪಿ.ಬಿ. ರಸ್ತೆಯಲ್ಲಿರುವ ನಂದಿನಿ ಲಾಡ್ಜ್‌ನಲ್ಲಿ ಜಗಳೂರು ಗ್ರಾಮದ ಭುವನೇಶ್ವರ ಎಂಬಾತ ಮೃತಪಟ್ಟಿದ್ದಾನೆ.

ನಂದಿನಿ ಲಾಡ್ಜ್‌ನಲ್ಲಿ ನಿನ್ನೆ ಭುವನೇಶ್ವರ ಅವರು ರೂಂ ಬಾಡಿಗೆ ಪಡೆದಿದ್ದಾರೆ. ಆದರೆ ರೂಂ ನಿಂದ ವ್ಯಕ್ತಿ ಹೊರಗಡೆ ಬರದೆ ಇರುವುದರಿಂದ ಇಂದು ಲಾಡ್ಜ್ ಮಾಲೀಕರು ಪೊಲೀಸ್ ಇಲಾಖೆಯ ಗಮನಕ್ಕೆ ತಂದರು.

ಪೊಲೀಸರು ಪರಿಶೀಲಿಸಿದಾಗ ಸಾವಿನ ವಿಷಯ ಬೆಳಕಿಗೆ ಬಂದಿದೆ. ಮೃತ ವ್ಯಕ್ತಿ ಕೆ.ಇ.ಬಿ. ಹೊರ ಗುತ್ತಿಗೆದಾರರಾಗಿದ್ದರು ಎನ್ನಲಾಗಿದೆ. ಸ್ಥಳಕ್ಕೆ ದಾವಣಗೆರೆ ಗ್ರಾಮಾಂತರ ಡಿವೈಎಸ್ಪಿ ಕನ್ನಿಕ, ನಗರ ಠಾಣೆಯ ಪಿಎಸ್‌ಐ ಸುರೇಶ್ ಮತ್ತು ಕ್ರೈಮ್ ಪಿಸಿಐ ಚಿದಾನಂದ, ಡಾ. ಛಾಯಾ, ಎ.ಎಸ್.ಐ. ಮಲ್ಲೇಶಪ್ಪ ಭೇಟಿ ಮಾಡಿ ಪರಿಶೀಲನೆ ನಡೆಸಿದ್ದಾರೆ.

ಪತ್ನಿ ಚೇತನ ಪತಿಯ ಸಾವಿನ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಸತೀಶ್, ತಿಪ್ಪೇಸ್ವಾಮಿ ಇತರರು ಹಾಜರಿದ್ದರು.

## ಯೋಗ : ಮಲೇಬೆನ್ನೂರಿನಲ್ಲಿ ಇಂದು ಉಪನ್ಯಾಸ

ಒಡೆಯರ ಬಸಾಪುರ ಗ್ರಾ.ಪಂ. ವ್ಯಾಪ್ತಿಯ ಪಟೇಲ್ ಬಸಪ್ಪ ಎಜುಕೇಶನ್ ಅಸೋಸಿಯೇಷನ್‌ನ ರಾಜರಾಜೇಶ್ವರಿ ಪ್ರೌಢಶಾಲೆಯಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ದಾವಣಗೆರೆ ನಿರಾಮಯ ಯೋಗ ಕೇಂದ್ರದ ಗುರುಗಳಾದ ಸಂಪತ್‌ಕುಮಾರ್ ಗುರೂಜಿ ಅವರಿಂದ ಯೋಗ ಕುರಿತು ವಿಶೇಷ ಉಪನ್ಯಾಸ ಹಾಗೂ ವಿದ್ಯಾರ್ಥಿಗಳಿಂದ ಯೋಗ ಪ್ರದರ್ಶನ ನಡೆಯಲಿದೆ.

ಸಂಸ್ಥೆಯ ಕಾರ್ಯದರ್ಶಿ ಜಿ.ಬಿ. ಶಿವಾನಂದಪ್ಪ, ಪ್ರಾಂಶುಪಾಲರಾದ ಶ್ರೀಮತಿ ಸುಜಾತ ಶಿವಾನಂದಪ್ಪ, ಮುಖ್ಯೋಪಾಧ್ಯಾಯ ಎಸ್. ಶಶಿಧರ್ ವೇದಿಕೆಯಲ್ಲಿ ಉಪಸ್ಥಿತರಿರುವರು.


**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಭಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಸೈಟ್ ಮಾರಾಟಕ್ಕೆ (ಬಂಗ್ಲೆ)**
1) 50x100 ಪೂರ್ವ ಶಿವ ಪಾರ್ವತಿ ಲೇಔಟ್ 2) ವಿದ್ಯಾನಗರ್ ವಿನಾಯಕ ಬಡಾವಣೆ 40X93 ಉತ್ತರ 3)KHB 60X80 ಪೂರ್ವ ಡಬಲ್ ರೋಡ್‌ಗೆ
ಕಿರಣ್ ಬೂಸ್ನೂರ್ (ಏಜೆಂಟ್)
98440-63409
(ಸೈಟ್ ಮನೆ ಮಾರಾಟಕ್ಕೆ ಕೊಳ್ಳುವದ್ದಕ್ಕೆ ವಿಚಾರಿಸಿ)

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆಗಳು ಬಾಡಿಗೆಗೆ ಇವೆ**
ತರಳಬಾಳು ಬಡಾವಣೆಯಲ್ಲಿ 3 ಬೆಡ್ ರೂಂ ಮನೆ
ರಾಂ ಅಂಡ್ ಕೋ ಸರ್ಕಲ್ ಹತ್ತಿರ, ಪಿ.ಜೆ. ಬಡಾವಣೆಯಲ್ಲಿ 3 ಬೆಡ್ ರೂಂ ಕೆಳಗಿನ ಮನೆ
ಸ್ವಾಮಿ ಏಜೆಂಟ್ (ವಿದ್ಯಾನಗರ)
97421 44715

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಪ್ರಕಾಶ ಟಿವಿ ಸೆಂಟರ್
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x80, 40x80 ಪೂರ್ವ ಅಕ್ಕ-ಪಕ್ಕ. ಡಾಲರ್ಸ್ ಕಾಲೋನಿಯಲ್ಲಿ 30x50 ಉತ್ತರ ನಿಜಲಿಂಗಪ್ಪ ಬಡಾವಣೆಯಲ್ಲಿ 30x30 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಬನಶಂಕರಿ ಬಡಾವಣೆಯಲ್ಲಿ 30x50, 30x60, 30x46, 40x50, 30x55 ಇನ್ನೂ ಇತರೆ ಅಳತೆಯ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
97432 09680

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಆಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**Wanted Teachers**
M Com, B.E, M.Tech, B.Sc, PCM / Nursing, M.Sc PCMB
ದಾವಣಗೆರೆ.
90195 80600

**ಬೇಕಾಗಿದ್ದಾರೆ**
ದಾವಣಗೆರೆಯ ವಿದ್ಯಾನಗರದಲ್ಲಿರುವ ಕಚೇರಿಯೊಂದಕ್ಕೆ ಸಹಾಯಕರೊಬ್ಬರು ಬೇಕಾಗಿದ್ದಾರೆ. ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂವಹನ ನಡೆಸುವ & ಕಂಪ್ಯೂಟರ್ ಜ್ಞಾನ ಅಗತ್ಯ. ನಿಮ್ಮ ಬಯೋಡಾಟಾ ಕಳುಹಿಸಿ :
directorpaeltd@gmail.com
99804 38600

**ಬೇಕಾಗಿದ್ದಾರೆ**
Distributor Officeಗೆ Receptionist ಬೇಕಾಗಿದ್ದಾರೆ. ಸಂಬಳ : 5000 Rs.
Address : Sri Vatsa Enterprises ಬ್ಯಾಡಗಿ ಶೆಟ್ರು ಸ್ಕೂಲ್, Opp P.J Extension, Davanagere.
90603 99111, 95353 97599

**ಬೇಕಾಗಿದ್ದಾರೆ**
B.Sc, B.Ed, (PCM) ವಿದ್ಯಾರ್ಹತೆ ಹೊಂದಿರುವ ಮತ್ತು JOC / VTC ವಿದ್ಯಾರ್ಹತೆ ಹೊಂದಿರುವ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
08192-255433, 91106 79096

**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್
81050 40110

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಮತ್ತು ಸೆಕ್ಯೂರಿಟಿ ಬೇಕಾಗಿದ್ದಾರೆ.
ಸಂಬಳ 9000 ಊಟ, ರೂಂ ಉಚಿತ.
ಸಂಪರ್ಕಿಸಿ:
97400 98047, 97400 98064

**ಮನೆ ಮಾರಾಟಕ್ಕಿದೆ**
ಮಣಿಕಂಠ ಸರ್ಕಲ್ ಹತ್ತಿರ 10x30 ಉತ್ತರ ದಿಕ್ಕಿನ ಮೂರು ಅಂತಸ್ತಿನ ಮನೆ ಮಾರಾಟಕ್ಕಿದೆ.
89716 93209, 89711 92936

**ಸೂರ್ಯ ನವೋದಯ**
(4ನೇ ಮತ್ತು 5ನೇ ತರಗತಿ ಮಕ್ಕಳಿಗೆ) ಅಡ್ಮಿಷನ್ ಪ್ರಾರಂಭ :1.6.2022 ರಿಂದ. ತರಗತಿಗಳು ಪ್ರಾರಂಭ: 22.6.2022
ಸ್ಥಳ: K.S.S ಕಾಲೇಜು ಸರಸ್ವತಿ ಬಡಾವಣೆ ದಾವಣಗೆರೆ.
ಸಮಯ: ಬೆಳಿಗ್ಗೆ 6-15 ರಿಂದ 7-45
ಸ್ಥಳ: ಕಾಮ್ರೇಡ್ ಲೆನಿನ್ ಶಾಲೆ ಡಾಂಗೇ ಪಾರ್ಕ್ ಹತ್ತಿರ, ದಾವಣಗೆರೆ.
ಸಮಯ: ಸಂಜೆ. 5-15 ರಿಂದ 6-45
ಶ್ರೀ ಸುರೇಶ ಪಿ. ಮುರಗಿ M.Sc, B.Ed
99028 24909, 98447 48763

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಮನೆ & ಮಳಿಗೆ ಬಾಡಿಗೆಗೆ ಇದೆ**
ವಿನೋಬನಗರದ, 3ನೆ ಮೇನ್, 9ನೆ ಕ್ರಾಸ್ ಸಿದ್ದಿವಿನಾಯಕ ಶಾಲೆ ಎದುರುಗಡೆ, ಚಿಕ್ಕ ಮನೆ (2500ರೂ) ಮತ್ತು ಚಿಕ್ಕ ಮಳಿಗೆ (800 ರೂ) ಬಾಡಿಗೆಗೆ ಇದೆ ವಿಚಾರಿಸಿ.
81055 52800 83106 78793

**Makeup Classes**
Professional makeup Artist Courses ಕಲಿಸಿಕೊಡಲಾಗುತ್ತದೆ.
(ಸರ್ಟಿಫಿಕೇಟ್ ಕೊಡಲಾಗುತ್ತದೆ.)
81974 43214

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಮನೆ ಬಾಡಿಗೆಗೆ ಇದೆ**
ಕುವೆಂಪು ನಗರ, M.C.C "B" Block 5th Cross, 20th main ಬಾಪೂಜಿ ಸ್ಕೂಲ್ ಹಿಂಭಾಗ, ಮೊದಲನೆ ಮಹಡಿ, ಪೂರ್ವಕ್ಕೆ ಬಾಗಿಲು, ಬೋರ್‌ವೆಲ್, ಕಾರ್ಪೊರೇಷನ್ ನೀರಿನ ಸೌಲಭ್ಯವುಳ್ಳ, ಮೂರು Bedroom. D.No. 3993/105 "ವಿನಯ" ವಾಸ್ತು ಪ್ರಕಾರ ಕಟ್ಟಿಸಿರುವ ಮನೆ.
70190 89694

**ಬೇಕಾಗಿದ್ದಾರೆ**
ದಾವಣಗೆರೆಯ ಕೌಶಲ್ಯ ತರಬೇತಿ ಸಂಸ್ಥೆಗೆ. ಬ್ಯಾಂಕಿಂಗ್ ತರಬೇತಿ ಟ್ರೈನರ್ (Banking trainer) ಕನಿಷ್ಠ 1-2 ವರ್ಷ ಕಲಿಸಿದ ಅನುಭವ ಇರಬೇಕು. ಇಂದೇ ಸಂಪರ್ಕಿಸಿ:
9036032079

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ತಕ್ಷಣ ಬೇಕಾಗಿದ್ದಾರೆ**
ಗೀಜರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ರಾಮನಗರ, ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
86183 92427

**ಬೆಣ್ಣೆ ದೋಸೆ ಭಟ್ಟರು ಬೇಕಾಗಿದ್ದಾರೆ**
ವಿಳಾಸ: ಕೊಲ್ಹಾಪೂರ
ಸಂಬಳ: 25000 to 30000, ವಸತಿ ಮತ್ತು ಊಟದ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
87886 31191

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**ಬೇಕಾಗಿದ್ದಾರೆ**
XEROX ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Computer ಜ್ಞಾನವುಳ್ಳವರಿಗೆ ಆದ್ಯತೆ (ರಾಮ್ ಅಂಡ್ ಕೋ ಹತ್ತಿರ)
70221 58935

**ಸೈಟ್ ಬೈ ಬ್ಯಾಕ್‌ಗೆ ಸಂಪರ್ಕಿಸಿ**
ದಾವಣಗೆರೆ ನಗರಕ್ಕೆ ಸಮೀಪ ಸೈಟ್ ಬೈ ಬ್ಯಾಕ್ ನೋಡುತ್ತಿರುವವರು ಹಾಗು ಸೈಟ್ ಖರೀದಿಗೆ ಆಸಕ್ತಿಯುಳ್ಳವರು ಸಂಪರ್ಕಿಸಿ
80880 60848


## ಕುರುಬ ಸಮಾಜದ ಹಿರಿಯ ಮುಖಂಡರಾದ ಡಾ. ಜಿ.ಕೆ. ಬಸವರಾಜ್ ನಿಧನ



ಕನಕ ಪಟ್ಟಣ ಸಹಕಾರ ಬ್ಯಾಂಕಿನ ಮಾಜಿ ಅಧ್ಯಕ್ಷರೂ,
ಕುರುಬ ಸಮಾಜದ ಹಿರಿಯ ಮುಖಂಡರೂ,
ಹಾಲಿವಾಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರೂ,
ಕಾಂಗ್ರೆಸ್ ಪಕ್ಷದ ಮುಖಂಡರೂ ಆದ

**ಡಾ. ಜಿ.ಕೆ. ಬಸವರಾಜ್** MBBS


ಅವರು ದಿನಾಂಕ 20.06.2022ರ ಸೋಮವಾರ ಸಂಜೆ 6.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ದಿನಾಂಕ 21.06.2022ರ ಮಧ್ಯಾಹ್ನ 12.30ಕ್ಕೆ ಹರಿಹರ ತಾಲ್ಲೂಕಿನ ಹಾಲಿವಾಣ ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು :

**ಶ್ರೀಮತಿ ಕುಸುಮ ಎ. ಕಪ್ಪಲಿ ಬಸವರಾಜಪ್ಪ**
ಪ್ರೌಢಶಾಲಾ ಸಹ ಶಿಕ್ಷಕರು, ಬಿಳಸನೂರು, ಹರಿಹರ ತಾಲ್ಲೂಕು
ಮತ್ತು ಜಿ.ಕೆ. ಸಹೋದರರು, ಉಕ್ಕಡಗಾತ್ರಿ ಹಾಗೂ ಬಂಧು-ಮಿತ್ರರು

|| ಶ್ರೀ ಶಿವ ನಾರದಮುನಿ ಪ್ರಸನ್ನ ||

## ಚಿರಸ್ಮರಣೆ



**ದಿ|| ದಾಸಪ್ಪ ಪರಮೇಶ್ವರಪ್ಪನವರು**

ಜನನ : 21.01.1938 ಮರಣ : 21.06.1999

*ನೀವು ನಮ್ಮನ್ನಗಲಿ ಇಂದಿಗೆ 23 ವರ್ಷಗಳಾದವು.*
*ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ತುಂಬಿದೆ.*
*ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪ.*

ದಾಸಪ್ಪ ವಂಶಸ್ಥರು
ಮೊಮ್ಮಗಳು : ಕು|| ಶಾರದಾಂಬ ಎಸ್. ದಾಸಪ್ಪ (ಚಿನ್ನು)
ಹಾಗೂ ಬಂಧು-ಮಿತ್ರರು, ದಾವಣಗೆರೆ.

## ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.

ಸಂಖ್ಯೆ:ಕಾಪಾಇಂ/ಪಂರಾಇಂ/ವಿದಾ/ಸ.ಇಂ-2/2022-23/446 ದಿನಾಂಕ: 20.06.2022

### ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಈ ವಿಭಾಗ ವ್ಯಾಪ್ತಿಯ ದಾವಣಗೆರೆಯ 2021-22ನೇ ಸಾಲಿನಲ್ಲಿ ವಿವಿಧ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಐಟಂವಾರು ದರಗಳನ್ನು ನಮೂದಿಸಲು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಏಕ ಲಕೋಟೆ ಪದ್ಧತಿಯುಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ:08/07/2022 ಸಂಜೆ 5.00 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 08192-250156 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.


ವಾಸಾಇ/ಡಿಐಜಿ/218/ಎಂಸಿಎ/2022-23
ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

## ಕೊಮಾರನಹಳ್ಳಿ ಗ್ರಾಮದ ಗಿರಳ್ಳೇರ ಗೂಳೆಪ್ಪ ನಿಧನ



ಹರಿಹರ ತಾ, ಕೊಮಾರನಹಳ್ಳಿ ಗ್ರಾಮದ ಗಿರಳ್ಳೇರ ಗೂಳೆಪ್ಪ (95) ಅವರು ದಿನಾಂಕ 20.06.2022 ರ ಸೋಮವಾರ ರಾತ್ರಿ 8-25 ಕ್ಕೆ ನಿಧನರಾದರು. ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.06.2022 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಕೊಮಾರನಹಳ್ಳಿಯಲ್ಲಿ ನೆರವೇರಲಿದೆ.


## ಹೊನ್ನನಾಯಕನಹಳ್ಳಿ ಶ್ರೀಮತಿ ಬಸಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೊನ್ನನಾಯಕನಹಳ್ಳಿ ವಾಸಿ ಗೌಡ್ರ ಸದಾಶಿವಪ್ಪನವರ ಧರ್ಮಪತ್ನಿ ಶ್ರೀಮತಿ ಬಸಮ್ಮ (80) ಅವರು ದಿನಾಂಕ 20.6.2022ರ ಸೋಮವಾರ ಮಧ್ಯಾಹ್ನ 2.20ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 21.6.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಹೊನ್ನನಾಯಕನಹಳ್ಳಿಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

75 ಸ್ವಾತಂತ್ರ್ಯದ ಅಮೃತಮಹೋತ್ಸವ

ನವ ಭಾರತಕ್ಕಾಗಿ ನವ ಕರ್ನಾಟಕ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

# ಮಾನವೀಯತೆಗಾಗಿ ಯೋಗ

ಜೂನ್ 21
2022
ಬೆಳಿಗ್ಗೆ 6.00
ಗಂಟೆಯಿಂದ

## 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

**ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಮೈಸೂರು ಅರಮನೆ ಆವರಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನ**

**ದೂರದರ್ಶನದ ಎಲ್ಲಾ ಚಾನೆಲ್‌ಗಳಲ್ಲೂ ನೇರ ಪ್ರಸಾರ ವೀಕ್ಷಿಸಬಹುದು**

"ಯೋಗ ಭಾರತೀಯ ಪ್ರಾಚೀನ ಪರಂಪರೆಯ ಅತ್ಯಮೂಲ್ಯ ಕೊಡುಗೆಯಾಗಿದೆ. ಯೋಗ, ಮನಸ್ಸು ಹಾಗೂ ಶರೀರ, ಆಲೋಚನೆ ಹಾಗೂ ಕ್ರಿಯೆ, ಸಂಯಮ ಹಾಗೂ ಸಾರ್ಥಕತೆ, ಮಾನವ ಹಾಗೂ ನಿಸರ್ಗದ ನಡುವೆ ಸಾಮರಸ್ಯ ಮತ್ತು ಆರೋಗ್ಯ ಹಾಗೂ ಯೋಗಕ್ಷೇಮದ ಕಡೆ ಸಮಗ್ರ ದೃಷ್ಟಿಕೋನಗಳನ್ನು ಒಳಗೊಂಡಿದೆ."

– ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ



- **'ಗಾರ್ಡಿಯನ್ ರಿಂಗ್,'** ಯೋಗ ಪ್ರದರ್ಶನದ ನೇರ ಪ್ರಸಾರದ ಕಾರ್ಯಕ್ರಮವಾಗಿದ್ದು, ಈ ವರ್ಷದ ಅಂತಾರಾಷ್ಟ್ರೀಯ ಯೋಗ ದಿನದ ಮುಖ್ಯ ಆಕರ್ಷಣೆಯಾಗಿದೆ. ಇದು, ವಿಶ್ವದಾದ್ಯಂತ ವಿವಿಧ ಭಾರತೀಯ ರಾಯಭಾರಿ ಕಛೇರಿಗಳ ಮೂಲಕ ಪ್ರಸಾರವಾಗುವ ಕಾರ್ಯಕ್ರಮದ ವೀಡಿಯೋ ಪ್ರಸಾರಗಳನ್ನು ಜೊತೆಗೂಡಿಸುವ ಕಾರ್ಯಕ್ರಮ. ಪೂರ್ವದಿಂದ ಆರಂಭಗೊಂಡು ಪಶ್ಚಿಮದ ಕಡೆಗೆ ಸಾಗುವ ರೀತಿಯಲ್ಲಿ **16 ವಿವಿಧ ವೇಳಾ ವಲಯಗಳಲ್ಲಿ 75 ರಾಷ್ಟ್ರಗಳಲ್ಲಿ** ಆಚರಿಸುವ ಯೋಗ ದಿನಾಚರಣೆಯನ್ನು ವೀಕ್ಷಿಸುವ ಅವಕಾಶವನ್ನು ಈ ಕಾರ್ಯಕ್ರಮ ಒದಗಿಸುತ್ತದೆ.
- **'ಆಜಾದಿ ಕಾ ಅಮೃತ್ ಮಹೋತ್ಸವ್'**ನ ಭಾಗವಾಗಿ ಭಾರತದಾದ್ಯಂತ **75 ಪ್ರಸಿದ್ಧ ಸ್ಥಳಗಳಲ್ಲಿ** ಯೋಗ ದಿನವನ್ನು ಆಚರಿಸಲಾಗುತ್ತಿದೆ.
- **ಜೂನ್ 21, 22ರಂದು ಮೈಸೂರು ದಸರಾ ಮೈದಾನದಲ್ಲಿ ಯೋಗದ ಬಗ್ಗೆ ಪ್ರದರ್ಶನ**
  ಯೋಗದ ಪ್ರಯೋಜನಗಳ ಕುರಿತು ಅರಿವು ಮೂಡಿಸಲು ಆಧುನಿಕ ಸಂವಹನಾ ತಂತ್ರಜ್ಞಾನಗಳ ಬಳಕೆಯ ಮೂಲಕ ಡಿಜಿಟಲ್ ಪ್ರದರ್ಶನ
  ಯೋಗದ ಭವ್ಯತೆ, ಇತರೆ ಆಯುಷ್ ಪದ್ಧತಿಗಳು ಹಾಗೂ ಯೋಗ ನವೋದ್ಯಮಗಳ ಕುರಿತು ತಿಳಿಸುವ ಪ್ರದರ್ಶನ

**ಯೋಗದ ಮೂಲಕ ಆರೋಗ್ಯ ಹಾಗೂ ಯೋಗಕ್ಷೇಮಕ್ಕಾಗಿ ಜಾಗತಿಕ ಆಂದೋಲನದ ಭಾಗವಾಗಿರಿ.**



### ಘನ ಉಪಸ್ಥಿತಿ

ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

### ವಿಶೇಷ ಆಹ್ವಾನಿತರು

**ಶ್ರೀ ಪ್ರಲ್ಹಾದ ಜೋಶಿ**
ಸನ್ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳು ಕಲ್ಲಿದ್ದಲು ಮತ್ತು ಗಣಿ ಸಚಿವರು

**ಕು. ಶೋಭಾ ಕರಂದ್ಲಾಜೆ**
ಸನ್ಮಾನ್ಯ ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ರಾಜ್ಯ ಸಚಿವರು

**ಶ್ರೀ ಎ. ನಾರಾಯಣಸ್ವಾಮಿ**
ಸನ್ಮಾನ್ಯ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವರು

**ಶ್ರೀ ಭಗವಂತ ಖೂಬಾ**
ಸನ್ಮಾನ್ಯ ಕೇಂದ್ರ ರಾಸಾಯನಿಕ ರಸಗೊಬ್ಬರ ಹಾಗೂ ನವೀಕರಿಸಬಹುದಾದ ಇಂಧನ ರಾಜ್ಯ ಸಚಿವರು

### ಮುಖ್ಯ ಅತಿಥಿಗಳು

**ಶ್ರೀ ಆರ್. ಅಶೋಕ**
ಸನ್ಮಾನ್ಯ ಕಂದಾಯ ಸಚಿವರು

**ಡಾ. ಅಶ್ವತ್ಥನಾರಾಯಣ ಸಿ. ಎನ್.**
ಸನ್ಮಾನ್ಯ ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ–ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

**ಡಾ. ಕೆ. ಸುಧಾಕರ್**
ಸನ್ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

**ಶ್ರೀ ಎಸ್.ಟಿ. ಸೋಮಶೇಖರ್**
ಸನ್ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು

**ಶ್ರೀ ವಿ. ಸುನಿಲ್‌ಕುಮಾರ್**
ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಇಂಧನ ಸಚಿವರು

**ಶ್ರೀ ಜೆ.ಸಿ. ಮಾಧುಸ್ವಾಮಿ**
ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

**ಶ್ರೀ ಆನಂದ್ ಸಿಂಗ್**
ಸನ್ಮಾನ್ಯ ಪರಿಸರ, ಜೀವಿಶಾಸ್ತ್ರ ಮತ್ತು ಪ್ರವಾಸೋದ್ಯಮ ಸಚಿವರು

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ**
ಸನ್ಮಾನ್ಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

**ಶ್ರೀ ಬಿ.ಸಿ. ನಾಗೇಶ್**
ಸನ್ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ವಿಧಾನಸಭೆ ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳು

**ಶ್ರೀ ಪ್ರತಾಪ್ ಸಿಂಹ**
ಸನ್ಮಾನ್ಯ ಲೋಕಸಭಾ ಸದಸ್ಯರು ಮೈಸೂರು ಮತ್ತು ಕೊಡಗು

**ಶ್ರೀ ಬಿ.ಎಸ್. ಯಡಿಯೂರಪ್ಪ**
ಸನ್ಮಾನ್ಯ ನಿಕಟಪೂರ್ವ ಮುಖ್ಯಮಂತ್ರಿಗಳು

**ಜಿಲ್ಲೆಯ ಎಲ್ಲಾ ಶಾಸಕರು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಎಲ್ಲಾ ಚುನಾಯಿತ ಪ್ರತಿನಿಧಿಗಳು ಭಾಗವಹಿಸುವರು.**

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 21, 2022



## ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆಗಾಗಿ ಆಗ್ರಹ

### ತೇಜಸ್ವಿ ಪಟೇಲ್ ನೇತೃತ್ವದಲ್ಲಿ ತಳ್ಳುವ ಗಾಡಿಯಲ್ಲಿ ಕೃಷಿ ಉತ್ಪನ್ನಗಳನ್ನು ಪ್ರದರ್ಶಿಸಿ ವಿನೂತನ ಪ್ರತಿಭಟನೆ

ದಾವಣಗೆರೆ, ಜೂ.20- ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಬೇಕಿಲ್ಲ. ಯಾವ ರೈತರಿಗೂ ಬ್ಯಾಂಕಿನಲ್ಲಿ ಸಾಲ ಬಾಕಿ ಉಳಿಯದಂತೆ ಕಾನೂನಿನ ಮಾನ್ಯತೆಯುಳ್ಳ ನ್ಯಾಯಯುತ ಬೆಲೆ ನಿಗದಿಪಡಿಸುವಂತೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಸರ್ಕಾರಕ್ಕೆ ಆಗ್ರಹಿಸಿದರು.

ನಗರದ ಜಯದೇವ ವೃತ್ತದಲ್ಲಿ ಇಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದಿಂದ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ನೀಡುವಂತೆ ಒತ್ತಾಯಿಸಿ ನಡೆಸಿದ ವಿನೂತನ ಪ್ರತಿಭಟನೆ ವೇಳೆ ಬಹಿರಂಗ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ದೇಶದಲ್ಲಿ ವೇತನ ಆಯೋಗ ನೀಡುವ ಶಿಫಾರಸ್ಸುಗಳನ್ನು ಶಾಸಕರು, ಸಂಸದರ ಗೌರವ ಧನ ಹೆಚ್ಚಳದ ಬಗ್ಗೆ ಗಂಭೀರತೆ ತೆಗೆದುಕೊಳ್ಳುವ ಸರ್ಕಾರಗಳು ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ ನೀಡುವಲ್ಲಿ ತಾತ್ಸಾರ ಮನೋಭಾವನೆ ತಾಳಿವೆ. ರಾಜ್ಯಕ್ಕೆ ಆದಾಯ ನೀಡುವುದರಲ್ಲಿ ರೈತರ ಪಾತ್ರ ಮಹತ್ವದ್ದಾಗಿದೆ. ದೇಶಕ್ಕೆ ರೈತರೇ ಜೀವಾಳ ಎಂದು ಹೇಳುವ ಸರ್ಕಾರಗಳು ರೈತರನ್ನು ನಿರ್ಲಕ್ಷಿಸುತ್ತಿವೆ. ಕೃಷಿ ಉತ್ಪನ್ನಗಳ ದರ ಏರಿಕೆಗೆ ಹಣದುಬ್ಬರದ ನೆಪವೊಡ್ಡುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ರೈತರ ಉತ್ಪನ್ನಕ್ಕೆ ಬೆಂಬಲ ಬೆಲೆ ಕೊಡಲಾಗುತ್ತಿದೆ ಎಂದು ಹೇಳುತ್ತಿದೆ. ಒಂದು ಬಾರಿಯೂ ಸಹ ನ್ಯಾಯಯುತ ಬೆಲೆ ಕೊಟ್ಟಿಲ್ಲ. ಕೃಷಿ ಉತ್ಪನ್ನಗಳಿಗೆ ದರ ನಿಗದಿ ಮಾಡುತ್ತಿರುವುದರಲ್ಲಿ ಅಪಮೌಲ್ಯವೇ ಹೆಚ್ಚಾಗಿದೆ. ಸರ್ಕಾರ, ಕೃಷಿ ಉತ್ಪನ್ನಗಳ ದರ ಹೆಚ್ಚಳದಿಂದ ಹಣ ದುಬ್ಬರ ಆಗುತ್ತದೆ ಎಂದು ಹೇಳುತ್ತಿದೆ. ಆದರೆ, ಸರ್ಕಾರ ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಮಾಡುತ್ತಿದೆ. ಇದು ಹಣದುಬ್ಬರ ಅಲ್ಲವೇ? ಎಂದು ಪ್ರಶ್ನಿಸಿದರು.

ಕೋವಿಡ್ ಸಂದರ್ಭದಲ್ಲಿ ಹಣದುಬ್ಬರಕ್ಕೆ ನಾವೇನಾದರೂ ಗಮನ ಕೊಟ್ಟಿದ್ದರೇ ನಾವು ಯಾವುದರಲ್ಲೂ ಉದ್ಧಾರ ಆಗುತ್ತಿರಲಿಲ್ಲ. ಹಣದುಬ್ಬರವನ್ನು ಬದಿಗಿಟ್ಟು ನಾವು ಕೋವಿಡ್ ನಿಯಂತ್ರಿಸಲು ಕ್ರಮ ಕೈಗೊಂಡಿರುವುದಾಗಿ ಆರ್‌ಬಿಐ ಗೌರ್ನರ್ ಹೇಳುತ್ತಾರೆ. ಹಾಗಿದ್ದರೆ ಸರ್ಕಾರ ಈಗ ಹೇಳುತ್ತಿರುವ ಹಣದುಬ್ಬರದ ಕುಂಟು ನೆಪವನ್ನು ಬದಿಗಿಟ್ಟು ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಗಮನ ಹರಿಸಿ ನ್ಯಾಯಯುತ ಬೆಲೆ ನಿಗದಿಪಡಿಸಬೇಕು ಎಂದು ಮನವಿ ಮಾಡಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಪೂಜಾರ್ ಅಂಜಿನಪ್ಪ, ಮುರುಗಯ್ಯ, ಪ್ರಭು ಗೌಡ ಸೇರಿದಂತೆ ಇತರರು ಭಾಗವಹಿಸಿದ್ದರು.

**ತಳ್ಳುವ ಗಾಡಿಯಲ್ಲಿ ಉತ್ಪನ್ನಗಳ ಪ್ರದರ್ಶನ :** ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದಿಂದ ನಡೆಸಿದ ಪ್ರತಿಭಟನೆಯಲ್ಲಿ ಕಬ್ಬು, ತೆಂಗು, ಅಡಿಕೆ ಶೇಂಗಾ, ಈರುಳ್ಳಿ, ಭತ್ತ, ಊಟದ ಜೋಳ, ಮೆಕ್ಕೆಜೋಳ ಇನ್ನಿತರೆ ಕೃಷಿ ಉತ್ಪನ್ನಗಳನ್ನು ತಳ್ಳುವ ಗಾಡಿಗಳಲ್ಲಿ ಪ್ರತ್ಯೇಕವಾಗಿಟ್ಟು ಪ್ರದರ್ಶಿಸಿ, ಕೃಷಿ ಉತ್ಪನ್ನಗಳ ದರ ನಿಗದಿಯ ಪಟ್ಟಿ ಹಿಡಿದು, ರೈತರ ಉತ್ಪನ್ನಗಳಿಗೆ ಎಂಎಸ್‌ಪಿ ಬೆಲೆ ನೀಡುವುದಕ್ಕಿಂತ ನ್ಯಾಯಯುತ ಬೆಲೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಜ್ಯ ಸರ್ಕಾರದ ಗಮನ ಸೆಳೆದರು. ನಂತರ ಪ್ರತಿಭಟನಾ ಸ್ಥಳಕ್ಕಾಗಮಿಸಿದ ಉಪವಿಭಾಗಾಧಿಕಾರಿ ಮುಖಾಂತರ ಪ್ರಧಾನ ಮಂತ್ರಿ ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು.

# ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಕಟಿಬದ್ಧ

### 27 ಸಾವಿರ ಕೋಟಿ ರೂ. ಯೋಜನೆಗಳಿಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ

ಬೆಂಗಳೂರು, ಜೂ. 20 - ಪ್ರಧಾನಿ ನರೇಂದ್ರ ಮೋದಿ ಅವರು ಇಂದು 27 ಸಾವಿರ ಕೋಟಿ ರೂ. ಅಭಿವೃದ್ಧಿ ಮತ್ತು ಮೂಲಸೌಕರ್ಯ ಯೋಜನೆಗಳಿಗೆ ಚಾಲನೆ ಹಾಗೂ ಅಡಿಪಾಯ ಹಾಕುವುದರೊಂದಿಗೆ ಮುಂಬರುವ ವಿಧಾನಸಭಾ ಚುನಾವಣೆಗೂ ಅಡಿಗಲ್ಲು ಹಾಕಿದ್ದಾರೆ.

ಎರಡು ದಿನಗಳ ಭೇಟಿಗಾಗಿ ಇಂದು ರಾಜ್ಯಕ್ಕೆ ಆಗಮಿಸಿದ ಪ್ರಧಾನಿ ಮಧ್ಯಾಹ್ನ ಕೊಮ್ಮಘಟ್ಟದಲ್ಲಿ ನಡೆದ ಸಾರ್ವಜನಿಕ ಸಮಾವೇಶದಲ್ಲಿ ಬೃಹತ್ ಮೌಲ್ಯದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದರು.

ಬೆಂಗಳೂರು ಉಪನಗರ ರೈಲ್ವೆ, ಯಲಹಂಕ-ಹೈದ್ರಾಬಾದ್ ಡಬ್ಲಿಂಗ್, ವರ್ತುಲ ರಸ್ತೆ ಸೇರಿದಂತೆ ಒಟ್ಟು ಐದು ರಾಷ್ಟ್ರೀಯ ಹೆದ್ದಾರಿಗಳಿಗೆ, ಏಳು ರೈಲ್ವೇ ಯೋಜನೆಗಳಿಗೆ ಚಾಲನೆ ನೀಡಿದರಲ್ಲದೆ, ಕರ್ನಾಟಕವನ್ನು ಅಭಿವೃದ್ಧಿಯ ಹೊಸ ಶಕೆಗೆ ಕೊಂಡೊಯ್ಯುವುದಾಗಿ ಭರವಸೆ ನೀಡಿದರು.

ಕಳೆದ 40 ವರ್ಷಗಳಲ್ಲಿ ಆಗದ ಕೆಲಸಗಳನ್ನು ಮುಂದಿನ 40 ತಿಂಗಳಲ್ಲಿ ಮಾಡಿ ತೋರಿಸುತ್ತೇವೆ ಎಂದೂ ತಿಳಿಸಿದರು.

ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ನಾವು ಕಟಿಬದ್ಧರಾಗಿದ್ದೇವೆ. ಹಿಂದೆ ಕೇವಲ ಮಾತಿನಲ್ಲೇ ಯೋಜನೆಗಳು ಪ್ರಸ್ತಾಪವಾಯಿತು. ಆದರೆ ಅವು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಕಾಂಗ್ರೆಸ್ಸನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು..

ಯಾವುದೇ ತೊಂದರೆಯಿಲ್ಲದೆ ರಾಜ್ಯದ ಜನರಿಗೆ ಜೀವನ ಮತ್ತು ಅವಕಾಶಗಳು ಲಭ್ಯವಾಗುವಂತೆ ನಮ್ಮ ಡಬಲ್ ಇಂಜಿನ್ ಸರ್ಕಾರ ಎಲ್ಲ ಮೂಲ ಸೌಕರ್ಯಗಳನ್ನು ಕಲ್ಪಿಸಲಿದೆ. ನೀವು ನಮಗೆ ನೀಡಿರುವ ಅಧಿಕಾರವನ್ನು ಎಲ್ಲಿಯೂ ದುರುಪಯೋಗ ಮಾಡದೇ ಒಂದು ಕ್ಷಣವೂ ವ್ಯರ್ಥ ಮಾಡದೇ ನಿಮ್ಮ ಸೇವೆಗೆ (2ನೇ ಪುಟಕ್ಕೆ)

### ಪ್ರಧಾನಿಗೆ ಆತ್ಮೀಯ ಸ್ವಾಗತ



ಬೆಂಗಳೂರು, ಜೂ. 20 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಂದಿನಿಂದ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ.

ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರವಾಸ ಕಾರ್ಯಕ್ರಮವನ್ನು ರೂಪಿಸಿದಂತಿದೆ.

ಸೋಮವಾರ ಬೆಳಿಗ್ಗೆ 11.55 ಕ್ಕೆ ಯಲಹಂಕ ವಾಯು ಪಡೆ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿಯವರನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು, ಸಂಸದ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬರಮಾಡಿಕೊಂಡರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಧಾನಿ ಅವರಿಗೆ ಪುಸ್ತಕವನ್ನು ನೀಡಿ, ಶಾಲು ಹೊದಿಸಿ ಗೌರವಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಯಲ ಹಂಕ (2ನೇ ಪುಟಕ್ಕೆ)



ನಗರದ ಉನ್ನತೀಕರಿಸಿದ ಐ.ಟಿ.ಐ ಲೋಕಾರ್ಪಣೆ

## ನಗರದ ಉನ್ನತೀಕರಿಸಿದ ಐ.ಟಿ.ಐ ಲೋಕಾರ್ಪಣೆ

ದಾವಣಗೆರೆ, ಜೂ. 20 - ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ತಾಂತ್ರಿಕ ಕೇಂದ್ರಗಳನ್ನಾಗಿ ಉನ್ನತೀಕರಿಸಲಾಗಿರುವ 150 ಐ.ಟಿ.ಐ. ಗಳ ಲೋಕಾರ್ಪಣೆ ಕಾರ್ಯಕ್ರಮದ ಪ್ರಯುಕ್ತ ದಾವಣಗೆರೆ ಸರ್ಕಾರಿ ಐ.ಟಿ.ಐ ಕಾಲೇಜು ಉನ್ನತೀಕರಣದ ಶಿಲಾಫಲಕವನ್ನು ಶಾಸಕ ಎಸ್.ಎ. ರವೀಂದ್ರನಾಥ್ ಅನಾವರಣಗೊಳಿಸಿದ್ದಾರೆ.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಕಾಲೇಜಿನ ಪ್ರಾಂಶುಪಾಲ ಏಕನಾಥ, ನಿರ್ಮಿತಿ ಕೇಂದ್ರದ ಎಸ್.ರವಿ, ಕಾಲೇಜು ಉಪನ್ಯಾಸಕರು ಸೇರಿದಂತೆ, ಸಿಬ್ಬಂದಿ ವರ್ಗದವರು ಉಪಸ್ಥಿತರಿರುವರು.

ರಾಜ್ಯ ಸರ್ಕಾರ ಹಾಗೂ ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ಮತ್ತು ಇತರೆ 20 ಉದ್ಯಮ ಪಾಲುದಾರರ ಸಹಯೋಗದೊಂದಿಗೆ ರಾಜ್ಯದ 150 ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತಾಂತ್ರಿಕ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ.

ರಾಜ್ಯಾದ್ಯಂತ ಕೈಗಾರಿಕೆ 4.0 ತಂತ್ರಜ್ಞಾನಕ್ಕೆ ಅತ್ಯವಶ್ಯಕವಾದ ನುರಿತ ಮಾನವ ಸಂಪನ್ಮೂಲ ಒದಗಿಸುವ ಕೋರ್ಸ್‌ಗಳ ಮೂಲಕ ವಾರ್ಷಿಕ 20,000 ಮತ್ತು ಅಲ್ಪಾವಧಿ ಕೋರ್ಸ್‌ಗಳ ಮೂಲಕ (2ನೇ ಪುಟಕ್ಕೆ)

## ಗದಗ - ಹೊನ್ನಾಳಿ ರಸ್ತೆ ಅಗಲೀಕರಣ

### ರೈತರ ಭೂಮಿ ನೇರ ಖರೀದಿಗೆ ನಿರ್ದೇಶನ



ಹೊನ್ನಾಳಿ, ಜೂ.20- 'ಗದಗ್ ಟು ಹೊನ್ನಾಳಿ' ನಡುವೆ ರಸ್ತೆ ಅಗಲೀಕರಣ ಕಾಮಗಾರಿ ಶೀಘ್ರವಾಗಿ ಮುಗಿಯಬೇಕಾಗಿರುವುದರಿಂದ ರೈತರಿಂದ ಜಮೀನನ್ನು ನೇರವಾಗಿ ಖರೀದಿ ಮಾಡಬೇಕೆಂದು ಕೆಶಿಫ್ ಅಧಿಕಾರಿಗಳಿಗೆ ಶಾಸಕ ಎಂ.ಪಿ. ರೇಣುಕಾಚಾರ್ಯ ಸೂಚನೆ ನೀಡಿದರು.

ಸೋಮವಾರ ತಾ.ಪಂ, ಕಚೇರಿಯಲ್ಲಿ 'ಗದಗ್ ಟು ಹೊನ್ನಾಳಿ' ರಸ್ತೆ ಅಗಲೀಕರಣಕ್ಕೆ ಸಂಬಂಧ ಪಟ್ಟಂತೆ ಪರಿಹಾರ ವಿಚಾರವಾಗಿ ರಸ್ತೆ ಇಕ್ಕೆಲಗಳಲ್ಲಿ ಬರುವ ರೈತರು, ಕೆಶಿಪ್ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ರಸ್ತೆ ಅಗಲಿಕರಣಕ್ಕೆ ಭೂಸ್ವಾಧೀನ ಮಾಡಿಕೊಂಡ ರೈತರಿಗೆ ಪ್ರತಿ ಗುಂಟೆಗೆ 17,444 ರೂ.ಗಳನ್ನು ಕೊಡಲಾಗುವುದು, ಈ ಬಗ್ಗೆ ಸರ್ಕಾರವೇ ಅಧಿಸೂಚನೆ ಹೊರಡಿಸಿದೆ, ರೈತರು ಪರಿಹಾರ ತೆಗೆದುಕೊಂಡು ನಮಗೆ ಜಮೀನು ಬಿಟ್ಟುಕೊಟ್ಟರೆ ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಬಹುದು ಎಂದು ರೈತರಲ್ಲಿ ಮನವಿ ಮಾಡಿದರು.

ಇದೇ ವೇಳೆ ರೈತ ಮಂಜುನಾಥ್ ಸರಳಿನಮನೆ ಮಾತನಾಡಿ, ಗುಂಟೆಗೆ 17444 ಕೊಟ್ಟರೆ ಎಕರೆಗೆ 6.97 (2ನೇ ಪುಟಕ್ಕೆ)



ಬೆಂಗಳೂರಿನ ಬಿಎಎಸ್‌ಇ ವಿಶ್ವವಿದ್ಯಾನಿಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ.

## ಅಗ್ನಿಪಥ್ ವಿರೋಧಿಸಿ ಎಲ್ಲೆಡೆ ಗಲಾಟೆ: ದಾವಣಗೆರೆ ರೈಲ್ವೆ ನಿಲ್ದಾಣದಲ್ಲೂ ನಿಗಾ



ದಾವಣಗೆರೆ, ಜೂ.20- ದೇಶದಲ್ಲಿ ಅಗ್ನಿಪಥ್ ವಿರೋಧಿಸಿ ನಡೆಯುತ್ತಿರುವ ಗಲಾಟೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ದೃಷ್ಟಿಯಿಂದ ನಗರದ ರೈಲ್ವೆ ನಿಲ್ದಾಣದಲ್ಲಿಂದು ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಯಿತು.

ಅಗ್ನಿಪಥ್ ಯೋಜನೆ ವಿರೋಧಿಸಿ ದೇಶದಲ್ಲಿ ಪ್ರತಿಭಟನೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ರೈಲ್ವೆ ನಿಲ್ದಾಣದಲ್ಲಿ ಕೆಎಸ್‌ಆರ್‌ಪಿ, ಡಿಎಆರ್ ಮತ್ತು ಪೊಲೀಸ್ ತಂಡದ ಸರ್ಪ ಗಾವಲು ಹಾಕಲಾಯಿತು. ಉತ್ತರ ಭಾರತದಿಂದ ಬರುವ ಯುವಕರು ಒಮ್ಮಲೇ ರೈಲ್ವೆ ನಿಲ್ದಾಣದಲ್ಲಿ ಗಲಾಟೆ ಮಾಡಬಹುದು ಎಂಬ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲಾ ಪೊಲೀಸ್ ಇಲಾಖೆ ಹದ್ದಿನ ಕಣ್ಣಿತ್ತು ಎಂದು ಹೇಳಲಾಗಿದೆ.

## ಅಗ್ನಿಪಥಕ್ಕಾಗಿ ಆನ್‌ಲೈನ್ ನೋಂದಣಿ ಆರಂಭ

ನವದೆಹಲಿ, ಜೂ. 20 - ಅಗ್ನಿಪಥ ಯೋಜನೆಯ ವಿರುದ್ಧ ದೇಶದ ಹಲವೆಡೆ ಪ್ರತಿಭಟನೆಗಳು ನಡೆಯುತ್ತಿರುವುದರ ಮಧ್ಯೆಯೇ, ಸೈನ್ಯದ ನೇಮಕಾತಿಗಾಗಿ ಆನ್‌ಲೈನ್ ಮೂಲಕ ನೋಂದಣಿ ಆರಂಭಿಸಲಾಗಿದೆ.

ಸೈನ್ಯಕ್ಕೆ ಸೇರಲು ಬಯಸುವವರು www.joinindianarmy.nic.in ವೆಬ್ ತಾಣದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕಿದೆ. ಎಲ್ಲಾ ಉದ್ಯೋಗಾಕಾಂಕ್ಷಿಗಳು ಹೊಸ ಮಾದರಿಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ.

ಅಗ್ನಿಪಥ ಯೋಜನೆಯಡಿ ನೇಮಕಗೊಳ್ಳುವವರನ್ನು ಅಗ್ನಿವೀರರೆಂಬ ಹೆಸರಿನಲ್ಲಿ ಹೊಸ ವಿಭಾಗದಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗುವುದು. ಇದು ಈಗಿರುವ ವಿಭಾಗ (2ನೇ ಪುಟಕ್ಕೆ)

## ಕೈಗಾರಿಕಾ ಕಾರಿಡಾರ್ : 1,156 ಎಕರೆ ಜಾಗಕ್ಕಾಗಿ ಪ್ರಸ್ತಾವನೆ

### ತ್ವರಿತವಾಗಿ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಲು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಸೂಚನೆ

ದಾವಣಗೆರೆ, ಜೂ. 20 - ಕೈಗಾರಿಕಾ ಕಾರಿಡಾರ್ ಯೋಜನೆಯಡಿ ಜಿಲ್ಲೆಯ ಆನಗೋಡು ಬಳಿ 1,156 ಎಕರೆ ಜಾಗ ಪಡೆಯಲು ಪ್ರಸ್ತಾವನೆ ಕಳಿಸಲಾಗಿದೆ. ಕೆ.ಐ.ಎ.ಡಿ.ಬಿ. ಮಂಡಳಿಯ ಅನುಮೋದನೆ ನಂತರ ಗೆಜೆಟ್ ಆದೇಶ ಹೊರ ಬೀಳಲಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ (2ನೇ ಪುಟಕ್ಕೆ) ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಸ್ಥಾಪಿಸಲಾಗುತ್ತಿರುವ ಈ ಕಾರಿಡಾರ್‌ಗಾಗಿ ಒಟ್ಟು 2,300 ಎಕರೆ ಪ್ರದೇಶವನ್ನು ಪಡೆಯುವ ಉದ್ದೇಶವಿದೆ ಎಂದು ತಿಳಿಸಿದರು.

ಈಗ ಮೊದಲ ಹಂತದಲ್ಲಿ 1,156 ಎಕರೆ ಜಾಗವನ್ನು ಆನಗೋಡು ಹೋಬಳಿಯಲ್ಲಿ ಪಡೆಯಲು ಜಿಲ್ಲಾಡಳಿತದಿಂದ ಪ್ರಸ್ತಾವನೆ ಕಳಿಸಲಾಗಿದೆ. ಕೆ.ಐ.ಎ.ಡಿ.ಬಿ. ಮಂಡಳಿಯು ಈ ಬಗ್ಗೆ ಪರಿಶೀಲನೆ ನಡೆಸುತ್ತಿದೆ ಎಂದವರು ಹೇಳಿದರು.

**ಉತ್ತೇಜನ ಕೊಡಿ :** ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಹರಿಹರ ತಾಲ್ಲೂಕಿನ ಸಾರಥಿ - ಕುರುಬರಹಳ್ಳಿ ಕೈಗಾರಿಕಾ ವಹಾಹತುವಿನಲ್ಲಿ 19



ನಿವೇಶನಗಳಿಗೆ ಬಂದಿರುವ ಪ್ರಸ್ತಾವನೆಗಳಿಗೆ ಅನುಮತಿ ನೀಡುವಂತೆ ತಿಳಿಸಿದ ಜಿಲ್ಲಾಧಿಕಾರಿ, ಒಂದೇ ನಿವೇಶನಕ್ಕೆ ಮೂವರು ಅರ್ಜಿ ಸಲ್ಲಿಸಿದ್ದಾರೆ. ಇವರಿಗೆ ಬೇರೆ ಸೂಕ್ತ ಪ್ಲಾಟ್ ಒದಗಿಸಿ ಎಂದು ಹೇಳಿದರು.

ಈ ವಸಾಹತುಗಳಲ್ಲಿ ಜಾಗ ಪಡೆದವರು ಎರಡು ವರ್ಷಗಳಾದರೂ ಕೈಗಾರಿಕೆಗಳನ್ನು ಆರಂಭಿಸಿಲ್ಲ. ಇವರಿಗೆ ಇರುವ ಸಮಸ್ಯೆಗಳೇನು ಎಂಬುದನ್ನು ಪರಿಶೀಲಿಸಿ, ಕೈಗಾರಿಕೆಗಳ ಆರಂಭಕ್ಕೆ ಸೂಕ್ತ ಉತ್ತೇಜನ ನೀಡುವಂತೆಯೂ ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ತಿಳಿಸಿದರು.

**ದಾವಣಗೆರೆಯವರಿಗೇ ಇಲ್ಲ :** ಹರಿಹರದ ಯಂತ್ರಪುರದಲ್ಲಿರುವ ಕೈಗಾರಿಕಾ ವಸಾಹತುವಿನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇದೆ. ಕಾಮಗಾರಿಗಳಿಂದಾಗಿ ರಸ್ತೆಗಳು ಹಾಳಾಗಿವೆ. ಇದನ್ನು ಸರಿಪಡಿಸಲು 5 ಕೋಟಿ ರೂ. ಒದಗಿಸಬೇಕು ಎಂಬ ಪ್ರಸ್ತಾವನೆಯನ್ನು ಹರಿಹರ ನಗರಸಭೆ ತಿರಸ್ಕರಿಸಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹರಿಹರೇಶ್ವರ ಸಣ್ಣ ಉದ್ಯಮಗಳ ಮಾಲೀಕರ ಒಕ್ಕೂಟದ ಕಾರ್ಯದರ್ಶಿ ಎನ್.ಸಿ. ಹನುಮಂತ ರಾವ್ ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ದಾವಣಗೆರೆಯ ಕೈಗಾರಿಕಾ (2ನೇ ಪುಟಕ್ಕೆ)

### ಬೇಡಿಕೆಯಿಲ್ಲದ ನಿವೇಶನಗಳು, ಖಾಲಿ ಶೆಡ್‌ಗಳು

ಕೆ.ಎಸ್.ಎಸ್.ಐ.ಡಿ.ಸಿ.ಯಿಂದ (ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ) ವತಿಯಿಂದ ಹರಿಹರ ತಾಲ್ಲೂಕಿನ ಸಾರಥಿ - ಕುರುಬರಹಳ್ಳಿ ಕೈಗಾರಿಕಾ ವಸಹಾತುವಿನಲ್ಲಿ ಖಾಲಿಯಿರುವ ನಿವೇಶನಗಳ ಹಂಚಿಕೆಗೆ ಹಲವು ಬಾರಿ ಆಹ್ವಾನ ನೀಡಿದರೂ ಸಹ, 46 ನಿವೇಶನಗಳಿಗೆ ಬೇಡಿಕೆ ದೊರೆತಿಲ್ಲ.

ಸಭೆಗೆ ಈ ವಿಷಯ ತಿಳಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಆನಂದ್, ಒಟ್ಟು 88 ನಿವೇಶನಗಳಲ್ಲಿ ಇದುವರೆಗೆ 42 ನಿವೇಶನಗಳಿಗೆ ಮಾತ್ರ ಅರ್ಜಿಗಳು ಬಂದಿವೆ ಎಂದಿದ್ದಾರೆ.

ಅಲ್ಲದೇ ಕೆ.ಎಸ್.ಎಸ್.ಐ.ಡಿ.ಸಿ. ರೂಪಿಸಿರುವ 'ವಿಶ್ವ' ಶೆಡ್‌ಗಳಿಗೂ ಹೆಚ್ಚಿನ ಬೇಡಿಕೆ ಬಂದಿಲ್ಲ. ಬಹಳಷ್ಟು ಶೆಡ್‌ಗಳು ಖಾಲಿ ಇವೆ. 2 ಶೆಡ್‌ಗಳಿಗೆ ಮಾತ್ರ ಅರ್ಜಿ ಬಂದಿವೆ ಎಂದವರು ಹೇಳಿದರು.

ಉದ್ಯಮಗಳಲ್ಲಿ (2ನೇ ಪುಟಕ್ಕೆ)

## ಶಾಸಕ ರಾಮಪ್ಪ ಯೋಗಾಭ್ಯಾಸ



ಹರಿಹರ, ಜೂ.20 - ನಗರದ ಹರಿಹರೇಶ್ವರ ದೇವಸ್ಥಾನದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಅಂಗವಾಗಿ ಪೂರ್ವಭಾವಿ ಯೋಗ ತರಬೇತಿಯಲ್ಲಿ ಶಾಸಕ ಎಸ್. ರಾಮಪ್ಪ ಯೋಗಾಭ್ಯಾಸ ಮಾಡಿದರು. ತಪೋವನ ಚೇರ್ಮನ್ ಡಾ. ಶಶಿಕುಮಾರ್, ಯೋಗ ಪಟು ಸ್ವಪ್ನ ಇತರರು ಹಾಜರಿದ್ದರು.


ಪರಿಮಳ ಕಾಫಿ ®




ಈಗ ಕೇವಲ
₹35 ಮಾತ್ರ
100 ಗ್ರಾಂ

ಬೆಸೆಯುವುದು
ಸಂಬಂಧಗಳ
ಬಾಂಧವ್ಯ

ಪರಿಮಳ ಕಾಫಿ ಕಂಪನಿ


|| ಶ್ರೀ ವೆಂಕಟೇಶ್ವರ ಪ್ರಸನ್ನ ||

ಶಿವ

## ಪ್ರಥಮ ವರ್ಷದ ಚಿರಸ್ಮರಣೆ



ಜನನ : 25.06.1952 ಲಿಂಗೈಕ್ಯ : 21.06.2021

### ಶರಣ ಸಿ. ಬಸವರಾಜಪ್ಪನವರು

ಬಸಾಪುರ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆಯಿತು, ನಿಮ್ಮ ಸರಳ ಜೀವನ, ಅಪರೂಪದ ಸಾತ್ವಿಕ ವ್ಯಕ್ತಿತ್ವ, ಸಮಾಜದ ಮೇಲಿನ ಕಳಕಳಿ, ಬಂಧು-ಮಿತ್ರರೊಂದಿಗಿನ ವಿಶ್ವಾಸ, ಸಂತೃಪ್ತಿಯ ಜೀವನ ನಮಗೆ ಇಂದಿಗೂ ದಾರಿದೀಪವಾಗಿದೆ. ಆ ಭಗವಂತನು ತನ್ನ ದೈವಿಕ ಸ್ವರ್ಗದಲ್ಲಿ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಸದಾ ನಿಮ್ಮ ನೆನಪು ಮಾರ್ಗದರ್ಶನದಲ್ಲಿ ನಡೆಯುತ್ತಿರುವ

ಮಕ್ಕಳಾದ : ಶ್ರೀ ಬಿ. ಶ್ರೀನಿವಾಸ ಮತ್ತು ಶ್ವೇತ ಮತ್ತು ಚಿ|| ಸೋಮು, ಬಸಾಪುರ.
ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ಚಂದ್ರಶೇಖರಪ್ಪ, ಹಾಲೇಕಲ್ಲು ಮತ್ತು ಚಿ|| ಸಿದ್ಧಾರ್ಥ,
ಶ್ರೀಮತಿ ಸುಪ್ರಿಯ, ಶ್ರೀ ಹನುಮಂತ್‌ರಾಜು,
ಸಹೋದರರಾದ : ಶ್ರೀಮತಿ ಶ್ರೀ ಸಿ. ಗುರುಸಿದ್ದಪ್ಪ ಮತ್ತು ಮಕ್ಕಳು, ಬಸಾಪುರ.
ಶ್ರೀಮತಿ ಶ್ರೀ ಸಿ. ಮಹೇಶ್ವರಪ್ಪ ಮತ್ತು ಮಕ್ಕಳು, ಬಸಾಪುರ.
ಶ್ರೀಮತಿ ವಿಶಾಲಾಕ್ಷಮ್ಮ, ದಿ|| ಈಶ್ವರಪ್ಪ ಮತ್ತು ಮಕ್ಕಳು, ಬಸಾಪುರ.
ಶ್ರೀಮತಿ ಗೌರಮ್ಮ, ಶ್ರೀ ಬಿ. ಬಸವರಾಜಪ್ಪ ಮತ್ತು ಮಕ್ಕಳು, ಬಹದ್ದೂರಘಟ್ಟ.
ಚನ್ನಬಸವಳ್ಳಿ ವಂಶಸ್ಥರು ಹಾಗೂ ಬಂಧು-ಮಿತ್ರರು.

## ಪ್ರಥಮ ವರ್ಷದ ಸವಿನೆನಪು



### ದಿ|| ಬಿ. ಗಿರೀಶ್ ( ಜಲ್ಲಿ )

(ಪ್ರವೀಣ್ ಜಲ್ಲಿ ಸಪ್ಲೈಯರ್ಸ್)

ಮರಣ : 21.06.2021

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆಯಿತು. ಸದಾ ನಿಮ್ಮ ನೆನಪಿನಲ್ಲಿರುವ

- ರಾಜಣ್ಣ, ಇಂಜಿನಿಯರ್
- ಕಿರಣ್ ಸ್ವಾಮಿ ♦ ಡಾ. ಸತೀಶ್
- ಎ. ಎಂ. ಮಳಗಿ

  ಮತ್ತು ಕುಟುಂಬ ಹಾಗೂ ಸಿಬ್ಬಂದಿ ವರ್ಗ
  ರೂಬಿ ಸ್ಟೋನ್ ಕ್ರಷರ್, ಗೌಳೇರಹಟ್ಟಿ
- ಓದೇ ಗೌಡ್ರು

  ಎಸ್.ಬಿ.ಎಸ್. ಸ್ಟೋನ್ ಕ್ರಷರ್
- ಯಶವಂತಗೌಡ್ರು

  ನಂದಿ ಸ್ಟೋನ್ ಕ್ರಷರ್
- ಶಿವಗಂಗಾ ಸ್ಟೋನ್ ಕ್ರಷರ್

## ಪ್ರಥಮ ವರ್ಷದ ಪುಣ್ಯಸ್ಮರಣೆ



### ದಿ|| ಬಿ. ಗಿರೀಶ್ (ಜಲ್ಲಿ)

ಮರಣ : 21.06.2021

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆಯಿತು.
ಸದಾ ನಿಮ್ಮ ನೆನಪು, ಮಾರ್ಗದರ್ಶನದಲ್ಲಿ ನಡೆಯುತ್ತಿರುವ

ಧರ್ಮಪತ್ನಿ : ಶ್ರೀಮತಿ ಜಿ. ಶೋಭಾ ಗಿರೀಶ್ (ಜಲ್ಲಿ)
ಮತ್ತು ಮಕ್ಕಳು
ಸಹೋದರರು, ಸಹೋದರಿಯರು, ಅಳಿಯಂದಿರು
ಹಾಗೂ ಬಂಧು-ಮಿತ್ರರು.

**ಪ್ರವೀಣ್ ಜಲ್ಲಿ ಸಪ್ಲೈಯರ್ಸ್**

ನಂ. 1949/8ಎ ವಿದ್ಯಾನಗರ ಕೊನೆಯ ಬಸ್ ಸ್ಟಾಪ್,
ಬೈಪಾಸ್ ಪಕ್ಕ, ಬನಶಂಕರಿ ಬಡಾವಣೆ, ದಾವಣಗೆರೆ-577005.
ಮೊ: 98453 42626


Sree Bhagwan Mahaveer Educational Trust(R)


JAIN VIDYALAYA
COMPOSITE P U COLLEGE

SPECIAL FOCUS ON THE HOLISTIC DEVELOPMENT OF EACH STUDENT {SCIENCE & COMMERCE}

ENQUIRIES ARE NOW OPEN FOR 2022-23

- Coaching by highly experienced and dedicated faculty.
- Concentrated and individual care about the progress of each student.
- Regular tests to train the students for board and competitive exams.
- Analysis of the results minutely and followup actions.
- Attractive campus,Vast Playground and well equipped science labs.
- Bus Facility

PU COMPETITIVE EXAMS




SCIENCE
- PCMB
- PCMCs


COMMERCE
- EABCs

Introductory Fees Only Rs. 30,000/- T&C for Science (First Come First Serve)

" AN INSTITUTE YOU CAN TRUST WITH OPPORTUNITY TO PROSPER "

9844474481 9844474485

Let Us Be Your Gateway To Knowledge






HEAD OFFICE
#65,5th Cross ,P J Extension
Davangere-577002

CAMPUS
#3348/182,Kasaba,Shamanur
Davangere-577004


## ವಿವಾಹ ವಾರ್ಷಿಕೋತ್ಸವದ 50 ನೇ ವರ್ಷದ ಸುವರ್ಣ ಮಹೋತ್ಸವ - ಶುಭಾಶಯಗಳು




ದಿನಾಂಕ 21.06.2022ರ ಮಂಗಳವಾರ ತಮ್ಮ ವಿವಾಹ ವಾರ್ಷಿಕೋತ್ಸವದ
50ನೇ ವರ್ಷದ ಸುವರ್ಣ ಮಹೋತ್ಸವ ಸಂಭ್ರಮದಲ್ಲಿರುವ

### ಶ್ರೀಮತಿ ರೇಖಾ ಮತ್ತು ಶ್ರೀ ಜೆ.ಆರ್. ಷಣ್ಮುಖಪ್ಪ

ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ದಾವಣಗೆರೆ.
ದಂಪತಿಗೆ ಹಾರ್ದಿಕ ಶುಭಾಶಯಗಳು.

- ಪುತ್ರ-ಸೊಸೆ: ಶ್ರೀಮತಿ ಉಷಾ ಮತ್ತು ಡಾ. ಜೆ.ಎಸ್. ನಾಗರಾಜ್
- ಮೊಮ್ಮಕ್ಕಳು: ಚಿ. ಜೆ.ಎನ್. ಧ್ಯಾನ್, ಕು. ಜೆ.ಎನ್. ದೀಕ್ಷಾ
- ಪುತ್ರ-ಸೊಸೆ: ಶ್ರೀಮತಿ ವೀಣಾ ಮತ್ತು ಎಂ.ಎಸ್. ನಟರಾಜ್

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte